ಡಾ. ಜಿ. ಪರಮೇಶ್ವರ : ಕೊಡಗು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ರೇಷ್ಮೆ ಕಸುಬಿನಲ್ಲಿರತಕ್ಕವರು ಇದ್ದಾರೆ. ಪರಿಶಿಷ್ಟ ಜಾತಿಯವರು 256 ಮಂದಿ ಇದ್ದರೆ ಪರಿಶಿಷ್ಟ ವರ್ಗದವರು 165 ಜನರಿದ್ದಾರೆ. ಇವರಿಗೆ 1991-92 ರಲ್ಲಿ 2,70,000 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1992-93 ರಲ್ಲಿ 1,73,000 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಪರಿಶಿಷ್ಟ ವರ್ಗದವರಿಗೆ 1991-92ರಲ್ಲಿ 86 ಸಾವಿರ ರೂಪಾಯಿಗಳನ್ನು, 1992-93 ರಲ್ಲಿ 1,40,000 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಹಣವನ್ನು 6 ಕಾರ್ಯಕ್ರಮಗಳ ಕೆಳಗೆ ನಾವು ಖರ್ಚು ಮಾಡಿದ್ದೇವೆ. ಮನೆ ಕಟ್ಟಿಸಿಕೊಳ್ಳುವುದಕ್ಕೆ ಸಬ್ಸಿಡಿ ಕೊಡುವದಾಗಲಿ ಅಥವಾ ಹಿಪ್ಪೆನೇರಳೆ ವ್ಯವಸಾಯಕ್ಕೆ ಅವರಿಗೆ ಬೇಕಾದ ಪ್ರೋತ್ಸಾಹ ಧನವಾಗಲಿ, ಹುಳು ಸಾಕಣೆ ಉಪಕರಣಗಳ ಸರಬರಾಜು ಮಾಡುವುದು. ಹೀಗೆ 6 ಕಾರ್ಯಕ್ರಮಗಳಿಗೆ ಪರಿಶಿಷ್ಟ ಜಾತಿಯವರಿಗೆ ಖರ್ಚು ಮಾಡಿದ್ದೇವೆ ಮತ್ತು ಪರಿಶಿಷ್ಟ ವರ್ಗದವರಿಗೆ 3 ಕಾರ್ಯಕ್ರಮಗಳಲ್ಲಿ ಖರ್ಚು ಮಾಡಿದ್ದೇವೆ. ಒಟ್ಟು ಎರಡು ವರ್ಷದ್ದು. ತಾವು 1991ರಿಂದ ಕೇಳಿದ್ದೀರಿ. ಎರಡು ವರ್ಷದ್ದು ಸೇರಿ ಪರಿಶಿಷ್ಟ ಜಾತಿಯವರಿಗೆ 6 ಲಕ್ಷ ರೂಪಾಯಿ ಮಂಜೂರಾದದ್ದು, ಅದರಲ್ಲಿ ಖರ್ಚು ಮಾಡಿರತಕ್ಕದ್ದು 4 ಲಕ್ಷದ 86 ಸಾವಿರ ರೂಪಾಯಿಗಳು. ಪರಿಶಿಷ್ಟ ವರ್ಗದವರಿಗೆ 4 ಲಕ್ಷ ರೂಪಾಯಿಗಳು ಮಂಜೂರ್ಮಾಡಿದ್ದರಲ್ಲಿ 1,75,000 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ತಾವು ಎರಡನೇ ಪ್ರಶ್ನೆ , ಇರಿಗೇಷನ್ ಬೋರ್‌ವೆಲ್ ಕೊಡುವುದರ ಬಗ್ಗೆ ಕೇಳಿದ್ದೀರಿ . ಎಸ್.ಸಿ.ಎಸ್.ಟಿ. ಕಾರ್ಪೊರೇಷನ್‌ನವರು ಈಗಾಗಲೇ ಇರಿಗೇಷನ್ ಬೋರ್‌ವೆಲ್‌ಗಳಿಗೆ ಹಣ ಕೊಡುತ್ತಿದ್ದಾರೆ. ಇದರ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ನಾವು ಹೊಸದಾಗಿ ಒಂದು ಕಾರ್ಯಕ್ರಮವನ್ನು ರೂಪಿಸಿ ಬರುವ ವರ್ಷದಿಂದ ಎಸ್.ಸಿ.ಎಸ್.ಟಿ. ಯವರಿಗೆ ಮತ್ತು ಬೇರೆಯವರಿಗೆ ಸಹ ಇರಿಗೇಷನ್ ಬೋರ್‌ವೆಲ್‌ಗಳನ್ನು ಕೊಡುವುದಕ್ಕೆ ಕಾರ್ಯಕ್ರಮ ರೂಪಿಸುತ್ತಿದ್ದೇವೆ.

ಶ್ರೀ ಎ. ಎಂ. ಬೆಳ್ಳಿಯಪ್ಪ : ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳಿಂದ ಒಂದು ಉತ್ತರ ಬರಲಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಹಣ ಕೊಡುತ್ತಿದ್ದೀರಲ್ಲ ಅದರಲ್ಲಿ ಯಾವ ಪಾಲಿಸಿಯನ್ನು ಅನುಸರಿಸುತ್ತಿದ್ದೀರಿ? ಎಷ್ಟು ಕೊಡಬೇಕೆಂಬ ಪಾಲಿಸಿ ಇದೆ? ನನ್ನ ಲೆಕ್ಕದ ಪ್ರಕಾರ ಮತ್ತು ನಿಮ್ಮ ಹತ್ತಿರ ಇರತಕ್ಕ ಲೆಕ್ಕದ ಪ್ರಕಾರ ಪರಿಶಿಷ್ಟ ಜಾತಿಯವರಿಗೆ ಸರಾಸರಿ 1020 ರೂಪಾಯಿಗಳನ್ನು , ಪರಿಶಿಷ್ಟ ಪಂಗಡದವರಿಗೆ 2400 ರೂಪಾಯಿ ಬರುತ್ತಿದೆ. ಏತಕ್ಕೆ ಈ ವ್ಯತ್ಯಾಸ ಬಂತು. ಯೂನಿಫಾರಂ ಪಾಲಿಸಿ ಇಲ್ಲವೆ? ಸರ್ಕಾರದ ಪಾಲಿಸಿ ಏನು? ಪರಿಶಿಷ್ಟ ಜಾತಿಯವರಿಗೆ ಮತ್ತು ಪರಿಶಿಷ್ಟ ಪಂಗಡದವರಿಗೆ ಈ ರೀತಿ ವ್ಯತ್ಯಾಸ ಏಕೆ?

ಡಾ. ಜಿ. ಪರಮೇಶ್ವರ : ಅವರಿಗೆ ನಾವು ಹಣಕೊಡುವಾಗ ಪರ್ಸೆಂಟೇಜ್ ಬೇಸಿಸ್ ಮೇಲೆ, 18 ಪರ್ಸೆಂಟ್ ಹಣ ಏನಿದೆ ಅದರಲ್ಲಿ 15 ಪರ್ಸೆಂಟ್ ಪರಿಶಿಷ್ಟ ಜಾತಿಯವರಿಗೆ, 3 ಪರ್ಸೆಂಟ್ ಪರಿಶಿಷ್ಟ ಪಂಗಡದವರಿಗೆ ಕೊಡಬೇಕೆಂದು ನೀತಿ ಇದೆ. ಅದರ ಪ್ರಕಾರ ಮಾಡಿಕೊಂಡು ಹೋಗಿದ್ದೇವೆ. ಇದರಲ್ಲಿ ಏನಾಗಿದ ಎಂದರೆ, ಇಲ್ಲಿ 77 ಜನ ಮಾತ್ರ ಪರಿಶಿಷ್ಟ ವರ್ಗದವರು ಇದ್ದಾರೆ.77 ಜನರಿಗೆ ಮಾತ್ರ ಕೊಟ್ಟಿದ್ದೇವೆ. ಪರಿಶಿಷ್ಟ ಜಾತಿಯವರು 165 ಜನರು ಇದ್ದಾರೆ. ಇದರಿಂದ ಹೆಚ್ಚಿಗೆ ಹಣ ಬಂದಿರಹುದು. ಅಷ್ಟು ಬಿಟ್ಟರೆ ಬೇರೇನೂ ವ್ಯತ್ಯಾಸ ಇಲ್ಲ.

<u>ವಿಷಯ :- ರಾಜ್ಯದಲ್ಲಿ ಮಿತವೇತನ ಪದವೀಧರರ ಸಂಖ್ಯೆ</u>

Q:259

ಶ್ರೀ ಜಿ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿರುವ ಮಿತವೇತನ ಪದವೀಧರರ ಸಂಖ್ಯೆ ಎಷ್ಟು?

ಆ) ಅದರಲ್ಲಿ ಈಗಾಗಲೇ ಖಾಯಂ ಸರ್ಕಾರಿ ಸೇವೆಗೆ ಸೇರಿರುವವರ ಸಂಖ್ಯೆ ಎಷ್ಟು? ಹಾಗೂ ಉಳಿದಿರುವವರ ಸಂಖ್ಯೆ ಎಷ್ಟು?

ಇ) ಆ ಬಗ್ಗೆ ನ್ಯಾಯಾಲಯದ ತೀರ್ಮಾನವೇನು ಹಾಗೂ ಅದರ ಅನುಷ್ಠಾನವನ್ನು ಸರ್ಕಾರ ಪಾಲಿಸಿದೆಯೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ರಾಜ್ಯದಲ್ಲಿನ ಮಿತವೇತನ ಪದವೀಧರರನ್ನು ಸಂಖ್ಯಾಧಿಕ ಹುದ್ದೆಗಳನ್ನು ಸೃಷ್ಟಿಸುವುದರ ಮೂಲಕ ಎರಡನೇ ದರ್ಜೆ ಸಹಾಯಕ ಹುದ್ದೆಗಳಲ್ಲಿ ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಎಲ್ 106 ಇಸಿಎಸ್ 89, ದಿನಾಂಕ : 17-8-1991 ಮತ್ತು ದಿನಾಂಕ : 5-9-1991ರ ಸ್ಥಾಯೀ ನಿಯುಕ್ತಿಗೊಳಿಸಲಾಗಿತ್ತು. ಆದರೆ, ಮಿತವೇತನ ಪದವೀಧರರು ತಮ್ಮನ್ನು ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಲ್ಲಿ ಸ್ಥಾಯೀ ನಿಯುಕ್ತಿಗೊಳಿಸಲು ಸಲ್ಲಿಸಿದ ರಿಟ್ ಅರ್ಜಿಸಂಬಂಧ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಸದರೀ ಆದೇಶಗಳನ್ನು ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಎಲ್ 106 ಇಸಿಎಸ್ 89, ದಿನಾಂಕ : 2-5-1992 ರಂದು ಹಿಂತೆಗೆದುಕೊಳ್ಳಲಾಗಿದೆ. ಪ್ರಸ್ತುತ ಈ ವಿಷಯವು ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದ ಮುಂದೆ ಇದ್ದು, ಅಂತಿಮ ತೀರ್ಪಿನ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಕೊಟ್ಟ ಉತ್ತರವನ್ನು ಓದಿಲ್ಲವೆಂದು ನನ್ನ ಭಾವನೆ. ಅವರ ರುಜು ಸಹ ಉತ್ತರದಲ್ಲಿ ಇಲ್ಲ. ಇದು ಅವರ ಗಮನಕ್ಕೆ ಬಂದಿಲ್ಲ. ವಿಧಾನಸಭೆಯಲ್ಲಿ ಮತ್ತು ವಿಧಾನಪರಿಷತ್‌ಗಳಲ್ಲಿ ಸಚಿವರು ಗಮನಿಸದ ಹೊರತು ಉತ್ತರ ಬರಬಾರದೆಂದು ಹಿಂದೆ ತೀರ್ಮಾನಮಾಗಿತ್ತು. ನನ್ನ ಪ್ರಶ್ನೆಯಲ್ಲಿ ಕೇಳಿರುವಂತೆ ಮಿತವೇತನ ಪದವೀಧರರಲ್ಲಿ ಖಾಯಂ ಆದವರ ಸಂಖ್ಯೆ ಎಷ್ಟು ? ಉಳಿದವರ ಸಂಖ್ಯೆ ಎಷ್ಟು ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರವನ್ನು ನಾವು ಕೊಟ್ಟಿದ್ದೇವೆ. ಆದರಲ್ಲೂ ಮಾನ್ಯ ಸದಸ್ಯರಲ್ಲಿ ಕೇಳಿ ಕೊಳ್ಳುವುದೇನೆಂದರೆ ಈ ವಿಚಾರ ಸುಪ್ರೀಂ ಕೋರ್ಟ್ ಮುಂದಿದೆ. ಒಂದೆರಡು ವಾರದಲ್ಲಿ ಇದರ ತೀರ್ಪು ಆಗುತ್ತದೆ. ಅದರ ನಂತರ ಸರಿಯಾಗಿ ಅವರಿಗೆ ಯಾವರೀತಿಯಲ್ಲಿ ಮಾಹಿತಿ ಬೇಕೋ ಅದನ್ನು ನಾವು ಕೊಡಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನನಗೆ ಗೊತ್ತು ಇವರು ಸಬ್‌ಜುಡೀಸ್ ಆಗುತ್ತದೆಂದು ಹೇಳುತ್ತಾರೆಂದು. ನಾನೂ ವಕೀಲ ಸ್ವಾಮಿ. ನಾನು ಎರಡನೆಯ ಪ್ರಶ್ನೆಯನ್ನು

ಸ್ಪಷ್ಟವಾಗಿ ಕೇಳಿದ್ದೇನೆ. ಯಾವಾಗಲೂ ಪ್ರತಿದಿವಸ ಏಕೆ ಹೀಗೆ ಮಾಡುತ್ತೀರಿ? ಸ್ಟೈಫಂಡರಿ ಗ್ರಾಜುವೇಟ್ಸ್ ಎಷ್ಟು? ಅವರಲ್ಲಿ ಪರ್ಮನೆಂಟ್ ಸರ್ವೀಸ್‌ಗೆ ಸೇರಿರುವವರು ಎಷ್ಟು? ಎಷ್ಟು ಜನ ಉಳಿದಿದ್ದಾರೆ? ಅದಕ್ಕೆ ಉತ್ತರ ಕೊಡದೆ ಇದು ಸಬ್‌ಜುಡೀಸ್ ಆಗುತ್ತದೆ ಅದು ಸುಪ್ರೀಂಕೋರ್ಟ್‌ನಲ್ಲಿ ತೀರ್ಮಾನವಾಗಬೇಕೆಂದರೆ ನಾನು ಏನು ಹೇಳಬೇಕು? ನಿಮ್ಮ ಹತ್ತಿರ ಎಷ್ಟು ಜನ ಸ್ಟೈಫಂಡರಿ ಗಾಜುಯೇಟ್ಸ್ ಇದ್ದಾರೆ ಅವರಲ್ಲಿ ಎಷ್ಟು ಜನರನ್ನು ರೆಗ್ಯುಲರೈಸ್ ಮಾಡಿದ್ದೀರಿ? ಎಷ್ಟು ಜನರನ್ನು ರೆಗ್ಯುಲರೈಸ್ ಮಾಡಬೇಕು. ಕೋರ್ಟ್ ಡಿಸಿಷನ್ ಏನು ಎಂದು ಕೇಳಿದ್ದೇವೆ ಅದಕ್ಕೆ ಉತ್ತರ ಇಲ್ಲ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಅಧ್ಯಕ್ಷರೆ, ಆ ಮಾಹಿತಿ ಬೇಕಾದರೆ ನಾನು ತರಿಸಿ ಕೊಡುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ನಾನು ಯಾವ ಮಾಹಿತಿಯನ್ನು ಕೇಳಿದ್ದೇನೆ? ಮತ್ತೆ ಸದನದಲ್ಲಿ ಪ್ರತಿ ದಿವಸ ಹೀಗಾದರೆ ನಾನು ಈ ಸಭೆಗೆ ಬರುವುದಿಲ್ಲ. ತಾವು ಓದಿ ನನ್ನ ಕ್ವೆಶ್ಚನ್?

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಮಾಧುಸ್ವಾಮಿಯವರೇ, ಒಂದು ನಿಮಿಷ ಈಲ್ಡ್ ಆಗಿ. ಮಾನ್ಯ ಅಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಗೌರವಾನ್ವಿತ ಸದಸ್ಯರಾದ ಮಾಧುಸ್ವಾಮಿಯವರ ನಿನ್ನೆಯ ಪ್ರಶ್ನೆಗೆ ಇದೇ ಉತ್ತರ ಬಂದಿದೆ. ಏನಾಗುತ್ತದೆಯೆಂದರೆ,ಕೆಲವು ಸದಸ್ಯರು ಇಲ್ಲಿ ಬಂದು ಅರಚಾಡಿದರೂ ಉತ್ತರ ಸಿಗುವುದಿಲ್ಲವೆಂದರೆ ಹೇಗೆ? ಅವರು ಏನು ಕೇಳಿದ್ದಾರೆ, ಇದರಲ್ಲಿ ಕೋರ್ಟ್ ಮ್ಯಾಟರ್ ಬರುವುದಿಲ್ಲ. ಈಗಾಗಲೇ ಸರ್ಕಾರಿ ಸೇವೆಗೆ ಸೇರಿ ಖಾಯಂ ಆದವರ ಸಂಖ್ಯೆ ಎಷ್ಟು? ಉಳಿದವರ ಸಂಖ್ಯೆ ಎಷ್ಟು? ಇದನ್ನು ಕೊಡುವದಕ್ಕೆ ಇಲ್ಲಿ ಕೋರ್ಟ್ ವಿಷಯ ಏತಕ್ಕೆ ಬರಬೇಕು? ಈ ಪ್ರಶ್ನೆಗೆ ಇನ್ನೊಂದು ಸಾರಿ ಉತ್ತರ ಕೊಡುತ್ತೇನೆಂದರೆ ಅರ್ಥವೇನು? ಅದರ ಅರ್ಥ ಗೌರವಾನ್ವಿತ ಮಂತ್ರಿಮಹೋದಯರು ಸದನಕ್ಕೆ ಬರುವುದಕ್ಕೆ ಮುಂಚೆ ವಿಷಯ ಗ್ರಹಣ ಮಾಡಿರುವುದಿಲ್ಲ.ಅಧಿಕಾರಿಗಳ ಜೊತೆಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿರುವುದಿಲ್ಲ. ಈಗ ಅಧಿಕಾರಿಗಳನ್ನು ಕರೆಯಿಸುತ್ತಾರೆ, ಈ ಪ್ರಶ್ನೆಗೆ ಏನು ಉತ್ತರ ಎಂದು ಕೇಳುತ್ತಾರೆ. ಈ ಸರ್ಕಾರದಿಂದ ಈ ಮಂತ್ರಿಗಳಿಂದ ನಾವು ಏನು ಫಲಿತಾಂಶವನ್ನು ನಾಚಿಕೆಗೆಟ್ಟು ಕೇಳಬಹುದು ಎಂಬುದನ್ನು ತಾವು ಪರಾಂಬರಿಸಬೇಕು. ಇವರಿಗೆ ಎಷ್ಟು ಹೇಳಿದರು ಅಷ್ಟೆ. ಮಂತ್ರಿಗಳು ಅಧಿಕಾರಿಗಳ ಹತ್ತಿರ ಈಗ ಹೋಗುತ್ತಿದ್ದಾರೆ. ನಾವು ಡಿಮಾಂಡ್ ರೈಸ್ ಮಾಡುತ್ತಿದ್ದೇವೆಯೇ? ಇದು ಬಹಳ ಸಿಂಪಲ್ ಕೊಶ್ಚನ್. ಎಷ್ಟು ಜನ ಇದ್ದಾರೆ ಎಷ್ಟು ಜನ ಇಲ್ಲವೆಂಬುದನ್ನು ನೀವೇ ಹೇಳಿ. ಆಡಳಿತ ಪಕ್ಷದ ಸದಸ್ಯರಿಗೂ ಇದೇ ತರಹ ಉತ್ತರ ಕೊಡುತ್ತಿದ್ದಾರೋ ಅಥವಾ ನಮಗೆ ಮಾತ್ರ ಈ ತರಹ ಮಾಡುತ್ತಿದ್ದಾರೋ ನಮಗೆ ಅರ್ಥವಾಗುತ್ತಿಲ್ಲ. ಇದರಲ್ಲಿ ಏನಿದೆ? ಅಂತಹ ಮಹತ್ವವಾದ ಪ್ರಶ್ನೆಯೇನೂ ಇದರಲ್ಲಿ ಇಲ್ಲ. ಇದರ ಅರ್ಥ ಏನೆಂದರೆ ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳಲೇಬೇಕಾಗಿದೆ.

ಶ್ರೀ ಆಂಜನಮೂರ್ತಿ : ಮಾನ್ಯ ಮಂತ್ರಿಗಳು ಗಿಳಿಪಾಠ ಒಪ್ಪಿಸಿದ ಹಾಗೆ ಒಪ್ಪಿಸುತ್ತಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಈ ಸದನದ ಸಮಯವನ್ನು ಹಾಳು ಮಾಡಲಿಕ್ಕೆ ಈ ಸರ್ಕಾರವೇ ಕಾರಣ, ಸಚಿವರೇ ಕಾರಣ. ಅವರು ಸರಿಯಾಗಿ ಉತ್ತರ ಕೊಟ್ಟರೆ ಸಮಯ

ಹಾಳಾಗುವುದಿಲ್ಲ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಅಧ್ಯಕ್ಷರೆ, ನಮ್ಮದು ತಪ್ಪಾಗಿದೆ ನಾನು ಒಪ್ಪಿಕೊಳ್ಳುತ್ತೇನೆ. 1978 ರಿಂದ 2461 ಜನ ಅಪ್ರೆಂಟೀಸ್‌ಗಳನ್ನು ಸರ್ಕಾರಿ ಹುದ್ದೆಗೆ ತೆಗೆದುಕೊಂಡಿದ್ದೇವೆ. ಈಗ 5 ಸಾವಿರ ಅಪ್ರೆಂಟಿಸ್ ಇದ್ದಾರೆ. 1990 ರಿಂದ ನಾವು ಯಾರನ್ನೂ ಸಹ ಸರ್ಕಾರಿ ಹುದ್ದೆಗೆ ತೆಗೆದುಕೊಂಡಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಇದು 9 ಸಾವಿರಕ್ಕೆ ಮೀರಿದ ಸಂಖ್ಯೆ ಇತ್ತು. ಇವರು 7 ಸಾವಿರ ಕೊಟ್ಟಿದ್ದಾರೆ. ಶ್ರೇಷ್ಠ ನ್ಯಾಯಾಲಯಕ್ಕೆ ಎಲ್ಲರೂ ಹೋಗಿಲ್ಲ. ಕೆಲವರು ಕನ್ಸೆಂಟ್ ಕೊಟ್ಟಿದ್ದಾರೆ. ಅವರಿಗೂ ಕೂಡ ತಾವು ರೆಗ್ಯುಲರೈಸ್ ಮಾಡಿಲ್ಲ.ವೆಕೆನ್ಸಿ ಇದ್ದ ಕಡೆ ಅವರಿಗೆ ಪ್ರೋವೈಡ್ ಮಾಡಿಲ್ಲ. ನಮ್ಮನ್ನು ವಿಲೇಜ್ ಅಕೌಂಟೆಂಟ್ ಆಗಿ ಹಾಕಬೇಡಿ ನಮಗೆ ಎಫ್‌ಡಿಸಿ ಸ್ಕೇಲ್ ಕೊಡಿಯೆಂದು ಕೇಳಿದ್ದು ಬಿಟ್ಟರೆ ಬೇರೇನೂ ಇರಲಿಲ್ಲ. ಸರ್ಕಾರ ಇದನ್ನು ಕನ್ಸಿಡರ್ ಮಾಡಬಹುದಾಗಿತ್ತು. ಸಬ್‌ಜುಡೀಸ್ ಆಗುತ್ತದೆನ್ನುವ ಮಾತು ಇಟ್ಟುಕೊಂಡು ಎಷ್ಟು ದಿವಸ ಈ ಸಮಸ್ಯೆಯನ್ನು ಜ್ವಲಂತವಾಗಿ ಇಡುತ್ತೀರಿ ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಸದಸ್ಯರು ಯಾವ ಪ್ರಶ್ನೆಯನ್ನು ಕೇಳಿದ್ದಾರೆ ಅದೇ ಪ್ರಶ್ನೆ ಸುಪ್ರೀಂ ಕೋರ್ಟ್‌ನಲ್ಲಿ ಇತ್ಯರ್ಥವಾಗಲಿಕ್ಕೆ ಇದೆ . ಅದು ಬೇಗನೆ ಒಂದೆರಡು ವಾರದಲ್ಲಿ ತೀರ್ಪು ಬರುತ್ತದೆ. ತೀರ್ಪು ಬಂದ ಕೂಡಲೇ ನಾವು ಇತ್ಯರ್ಥ ಮಾಡುತ್ತೇವೆ.

<u>ವಿಷಯ :- ಬೀಡಿ ಕಾರ್ಮಿಕರಿಗೆ ಮಜೂರಿಗಳನ್ನು ಹೆಚ್ಚಿಸುವುದು.</u>

Q:1254

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಬೀಡಿ ಮಾಲೀಕರು, ಬೀಡಿ ಗುತ್ತಿಗೆದಾರರು, ಹಾಗೂ ಬೀಡಿ ಕಾರ್ಮಿಕರೆಷ್ಟು? ತಾಲ್ಲೂಕುವಾರು ವಿವರ ನೀಡುವುದು.

ಆ) ದಕ್ಷಿಣ ಕನ್ನಡದಲ್ಲಿ ಈಗ ಚಾಲ್ತಿಯಲ್ಲಿರುವ ಬೀಡಿ ಮಜೂರಿ ಎಷ್ಟು ಹಾಗೂ ಈಗಿರುವ ಮಜೂರಿಯನ್ನು ಹೆಚ್ಚಿಸಲು ಸರ್ಕಾರ ಯೋಜಿಸಿದೆಯೇ?

ಇ) ಬೀಡಿ ಮಜೂರರಿಗೆ ಈಗ ಇರುವ ಸವಲತ್ತುಗಳು ಯಾವುವು? (ವಿವರ ನೀಡುವುದು)

ಈ) ಬೀಡಿ ಮಜೂರರಿಗೆ ಮಾಲೀಕರಿಂದ ಗುತ್ತಿಗೆದಾರರುಗಳಿಂದ ಅನ್ಯಾಯಗಳೇನಾದರೂ ಆಗುತ್ತಿರುವ ಬಗ್ಗೆ ಮನವಿಗಳು ಬಂದಿದೆಯೇ? (ವಿವರ ನೀಡುವುದು)

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬೀಡಿ ಮಾಲೀಕರು, ಗುತ್ತಿಗೆದಾರರು ಹಾಗೂ ಕಾರ್ಮಿಕರ ವಿವರಗಳು ಈ ಕೆಳಕಂಡಂತೆ ಇದೆ :-